ಮೈಸೂರ ಗಿಜಿಟ್.

ನಂ. 7 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಫಿಬ್ರವರೀ ತಾ|| 19, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 27—30

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಿಲ್ ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೆರಿ ಅಸಿಸ್ಟೆಂಟರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಖಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಿಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟಿಸ್‌ಗಳು. .. .. 59—72

3ನೇ ಭಾಗ—ಇಂಡ್ಯ ಗವರ್ಮೆಂಟಿನ ಮುಂತ್ರಾಲೋಚಕ ಸಭೆಯವರ ಆಕ್ಟ್ಯುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾವ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 366. ತಾರೀಖು 1ನೇ ಫಿಬ್ರವರೀ 1876.

ಫಸ್ಟ್‌ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಮೇಜರ್ ಲಿಂಡಸೆ ಸಾಹೆಬರು ಫರಲೋರಜಾವಿಂದ ವಾಪಸ್ ಬಂದಂತೆ ಮುದರಾಸಿನಲ್ಲಿ ಮಾಹೆಗುಜಸ್ತ್ 19ನೇ ಮುರ್ತುಂನಲ್ಲು, ಬೆಂಗಳೂರಲ್ಲಿ ಜಾಲತಿ ಮಾಹೆ ಗುರ್ಯೇ ತಾರೀಖಿನಲ್ಲು, ರಿಪೋರ್ಟು ಮಾಡಿದರು.

ನಂ. 368. ತಾರೀಖು 14ನೇ ಫಿಬ್ರವರೀ 1876.

ತಮ್ಮನ್ನ ನೋಡಲು ಇಚ್ಛೈಸುವ ಯಾವ ನೇಟಿವ್ ದೊಡ್ಡ ಮನುಷ್ಯನನ್ನಾಗಲಿ, ಮಂಗಳವಾರ ಬೆಳಿಗ್ಗೆ 8 ಘಂಟೆ ಲಾಗಾಯತು 9 ಘಂಟೆ ವರಿಗೆ, ಈ ಮಧ್ಯ ಕಾಲದಲ್ಲಿ ಗಾರ್ಡಮೆಂಟ್ ಹೌಸಿನೊಳಗೆ ಆಕ್ಟಿಂಗ್ ಚೀಫ್ ಕಮ್ಮಿಷನರ್ ಸಾಹೆಬರವರು ಬರ ಮಾಡಿಕೊಳ್ಳುವರು.

ಆಕ್ಟಿಂಗ್ ಚೀಫ್ ಕಮ್ಮಿಷನರ್‌ರವರನ್ನು ನೋಡಲು ಉದ್ದೇಸಿಸುವ ದೊಡ್ಡ ಮನುಷ್ಯರು, ಸದರೀ ಮಂಗಳವಾರಕ್ಕೆ ಹಿಂದಿನ ದಿನ ಮಧ್ಯಾನ್ಹಕ್ಕೆ ಪೂರ್ವ ತಮ್ಮ ತಮ್ಮ ಕಾರ್ಡುಗಳನ್ನು ಸೆಕ್ರಟೇರಿ ಸಾಹೆಬರ ಬಳಿಗೆ ಕಳುಹಿಸಿಕೊಡಬೇಕೆಂದು ಕೋರೋಣಾಗಿರುತ್ತೆ. ಮತ್ತು ಯಾವ ವಿಷಯವನ್ನಾದರೂ ಕುರಿತು ಚರ್ಚಿಸುವದಕ್ಕೆ ಅವರಿಗೆ ಖಾಯಿಷ್ ಯಿದ್ದಲ್ಲಿ ಅಂತಾ ಖಾಯಿಷನ್ನು ಲೆಟರ್ ಮೂಲಕ ತಿಳಿಸತಕ್ಕದ್ದು.

ನಂ. 369. ತಾರೀಖು 14ನೇ ಫಿಬ್ರವರೀ 1876.

ಸ್ರ 1875ನೇ ಇಸವಿ ಅಕ್ಟೋಬರ್ 25ನೇ ಮುರ್ತುಂ 266ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಬೂದಿಹಾಳ ತಾಲ್ಲೂಕು ಅಮಲ್ದಾರ್ ಶಿ. ರಾಮೈಯ್ಯನವರಿಗೆ ಮೆಡಿಕಲ್ ಸರಟಿಫಿಕೇಟ್ ಮೇಲೆ ಕೊಡಲ್ಪಟ್ಟ 9 ತಿಂಗಳ ರಜಾ, 1876ನೇ ಇಸವಿ ಏಪ್ರೆಲ್ 30ನೇ ಮುರ್ತುಂ ವರಿಗೆ ವಿಸ್ತರಿಸಲ್ಪಟ್ಟಿರುತ್ತೆ.

ಅಮಲ್ದಾರ್ ವ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಸಲ್ದಾನಹಾ ಯವರು ರಾಮೈಯ್ಯನವರ ಗೈರ್‌ಹಾಜರೀಯಲ್ಲಿ ಅಥವಾ ಮುತ್ತೊಂದು ಹುಕ್ಕುಂ ಕೊಡುವ ವರಿಯಂತ ಬೂದಿಹಾಳ ತಾಲ್ಲೂಕು ಅಮಲ್ದಾರೀ ಕೆಲಸವನ್ನು ಆಕ್ಟಿಂಗ್ ತರೀಕ ನೋಡುತ್ತಾ ಯಿರತಕ್ಕದ್ದು.

ನಂ. 370. ತಾರೀಖು 14ನೇ ಫಿಬ್ರವರೀ 1876.

ಮೆಸ್ಸರ್ ಪಿ. ನ. ಕೃಷ್ಣಮೂರ್ತಿ B. L. ಯವರು, ನಂಜನಗೂಡು ಸಬ್ ಡಿವೀಜ್ಞ ಕೋರ್ಟು ಚಾರ್ಜನ್ನು ಮೆಸ್ಸರ್ ಶ್ರೀನಿವಾಸರಾವ್ ಯವರಿಂದ 1876ನೇ ಇಸವಿ ಜನವರೀ 22ನೇ ಮುರ್ತುಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕ್ಕೊಂಡರು.

ನಂ. 371. ತಾರೀಖು 17ನೇ ಫಿಬ್ರವರೀ 1876.

ಅಪಾಶಿಕೇರಿ ಮೆಕ್‌ಫಾರ್ಲೆಡ್ ಯವರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾವನ್ನು ಕಾಹಿಲೆ ರಜಾಕ್ಕೆ ಬದಲಾಯಿಸಿ, ಹುಟ್ಟಿದ 1876ನೇ ಇಸವಿ ಜನವರೀ 24ನೇ ಮುರ್ತುಂ 353ನೇ ನಂಬರ್ ಈ ಅಫಿಸ್ ಇಸ್ತಿಹಾರ್ ನಾಮೆಯು ಯಿದರ ದೆಶೇಯಿಂದ ರದ್ದು ಮಾಡಲ್ಪಟ್ಟು ಇದೆ.

ನಂ. 372. ತಾರೀಖು 17ನೇ ಫಿಬ್ರವರೀ 1876.

ಮೇಜರ್ ಲಿಂಡ್ಸೆ ಸಾಹೆಬರು ಟ್ರೆ ವ ಕಂಟೋರ್ಮೆಂಟ್ ಮ್ಯಾಜಿಸ್ಟ್ರೇಟ್ ಆಫಿಸ್ ಚಾರ್ಜನ್ನು ಮೇಜರ್ ಮೊಟೆಟ್ ಸಾಹೆಬರಿಂದ 1876ನೇ ಇಸವಿ ಫಿಬ್ರವರೀ 9ನೇ ಮುರ್ತುಂ ಮಧ್ಯಾನ್ಹ ತ್ವರ ತೆಗದುಕ್ಕೊಂಡರು.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್.

ನಂ. 121. ತಾರೀಖು 14ನೇ ಫಿಬ್ರವರೀ 1876.

ಮೈಸೂರ ವ ಕೊಡಗು ಶೀಮೆಗಳಲ್ಲಿರುವ 3ನೇ ಕ್ಲಾಸ್ ಮುಸಾಫರ್ ಬಂಗ್ಲೆಗಳ ವಾಸದ ವಿಷಯ್ದುದಲ್ಲಿ ಯೇರ್ಪಟ್ಟ ಇದರಿ ಬರುವ ನಿಬಂಧನೆಗಳು, ಸ್ರ 1876ನೇ ಇಸವಿ ಏಪ್ರೆಲ್ ಗುರ್ರೇ ತಾರೀಖು ಲಾಗಾಯತು ಜಾರೀಯಲ್ಲಿ ಬರತಕ್ಕದ್ದಾಗಿರುತ್ತೆ.

(1) 24 ಘಂಟೆಗೆ ಮಿಾರದ ಯಾವ ವಾಸಕ್ಕಾಗಲಿ ರುಸುಂ ಕಟ್ಟಲ್ಪಡುವದಿಲ್ಲವು.

(2) 24 ಘಂಟೆಗೆ ಮಿಾರುವ ಯಾವ ವಾಸಕ್ಕಾಗಲಿ ಈ ಕಳಗೆ ಬರುವ ಮೇರೆ ರುಸುಂ ವಾವತೀ ಮಾಡಲ್ಪಡತಕ್ಕದ್ದು.